


**ಕಥೆ** : ಡಾ. ಎಚ್. ಪಾಂಡುರಂಗ ವಿಠಲ
**ಚಿತ್ರ** : ಪಿ. ಪುರುಷೋತ್ತಮ ಕಾರಂತ್

**ಪು**ರಾತನ ಈಜಿಪ್ಟಿನ ಸೂಫಿ ಸಂತ ಧುನ್ ನುನ್. ಅವನ ಬಳಿ ಕಲಿಯಲು ಬಂದವರನ್ನು ಪೇಚಿಗೆ ಸಿಲುಕಿಸಿ ತಬ್ಬಿಬ್ಬು ಮಾಡುವುದು ಅವನ ಪಾಠದ ರೀತಿ. ಇದು ಅಧಿಕ ಪರಿಣಾಮಕಾರಿ ಎಂದು ಅವನ ಅನುಭವ.

ಒಂದು ದಿನ ಈತ ತಲೆಗೂದಲು ಹರಡಿ, ಒಗಟಿನ ರೀತಿಯಲ್ಲಿ ಅಸಂಬದ್ಧವಾಗಿ ಮಾತಾಡಲು ಆರಂಭಿಸಿದನು. ಬೇರೆಯವರ ಮಾತಿಗೆ ಕಿವುಡನಂತೆ ನಟಿಸುವನು. ಯಾರಿಗೂ ಅವನೊಡನೆ ಸಂಭಾಷಣೆ ಅಸಾಧ್ಯವಾಯಿತು. ಧುನ್ ನುನ್ ಹುಚ್ಚ! ಧುನ್ ನುನ್ ಹುಚ್ಚ! ಎಂದು ಹುಡುಗರು ಗೇಲಿಮಾಡಲು ತೊಡಗಿದರು. ಕೊನೆಗೆ ಹುಚ್ಚಾಸ್ಪತ್ರೆಗೆ ಸೇರಿಸಿದರು. ಆ ಕಾಲದ ಪದ್ಧತಿಯಂತೆ ಅವನ ತಲೆ ಬೋಳಿಸಿ ಕೈಕಾಲು ಕುತ್ತಿಗೆಗೆ ಕೋಳ ತೊಡಿಸಿ ಕೂಡಿಹಾಕಿದರು.

ಧುನ್ ನುನ್‌ನ ಆಪ್ತ ಶಿಷ್ಯರು ಈ ವದಂತಿ ನಂಬಲಿಲ್ಲ. 'ನೆರೆಯವರನ್ನು ನಟನೆಯಿಂದ ಮೋಸಗೊಳಿಸಿದ್ದಾನೆ. ನಮ್ಮ ಪ್ರೀತಿ ಅವರಿಗಿಂತ ಹೆಚ್ಚಿದೆಯೋ ಇಲ್ಲವೋ, ಎಂದಿನಂತೆ ಕಲಿಯಲು ಬರುತ್ತಾರೋ ಎಂದು ಪರೀಕ್ಷಿಸುತ್ತಿದ್ದಾನೆ', ಎಂದು ಮಾತನಾಡಿಕೊಂಡು ಅವನಲ್ಲಿಗೆ ಹೋದರು. ಅವರು ಬರುತ್ತಿದ್ದಂತೆ ಕೋಳಗಳ ದನಿ ಮಾಡುತ್ತ ಜೋರಾಗಿ ಗರ್ಜಿಸಿದ: "ನೀವು ಯಾರೆಂದುಕೊಂಡಿದ್ದೀರಿ!" ಎಂದು. "ನೀವು ಹುಚ್ಚರಲ್ಲವೆಂದು ನಮಗೆ ಗೊತ್ತು. ಇದು ನಟನೆ. ನಿಮ್ಮೊಡನೆ ಇದ್ದು, ವಿದ್ಯೆ ಕಲಿಯಲು ಬಂದಿದ್ದೇವೆ", ಎಂದು ಆ ವಿದ್ಯಾರ್ಥಿಗಳು ಅಳುಕುತ್ತ ಹೇಳಿದರು.

ಇನ್ನೂ ಜೋರಾಗಿ ಕಣ್ಣುಗಳನ್ನು ತಿರುಗಿಸುತ್ತ, "ಮೂರ್ಖರೇ! ನಿಮಗೆ ಪಾಠ ಕಲಿಸುತ್ತೇನೆ", ಎನ್ನುತ್ತಾ ಆ ಗುರು ಮರದ ತುಂಡುಗಳು, ಕಲ್ಲುಗಳನ್ನು ಅವರತ್ತ ಎಸೆದ. ಏಟುಗಳನ್ನು ತಿಂದು, ಹೆದರಿಬಿಟ್ಟ ಶಿಷ್ಯರು, "ಇವನು ನಿಜವಾಗಿಯೂ ಹುಚ್ಚ, ನಮಗೆ ಹೇಗೆ ಬೋಧಿಸಬಲ್ಲ! ಬೇರೆ ಗುರುವನ್ನು ಹುಡುಕೋಣ", ಎಂದು ತೀರ್ಮಾನಿಸಿದರು. "ಧುನ್ ನುನ್ ಹುಚ್ಚ! ಧುನ್ ನುನ್ ಹುಚ್ಚ!" ಎಂದು ಅನುಯಾಯಿ ಗಳೇ ಜೋರಾಗಿ ಹೇಳಿ ಹೊರಟದ್ದನ್ನು ದೂರದಿಂದ ಕಂಡು ಕಾವಲುಗಾರ ಬಂದ.

"ನೀವು ಇಂದು ಬೆಳಗ್ಗೆ ಕಲ್ಲು, ಕೋಲುಗಳನ್ನು ಏಕೆ ತರಿಸಿಟ್ಟಿರಿ ಎಂದು ಈಗ ತಿಳಿಯಿತು, ಆದರೆ ಹೀಗೆ ನಿಮ್ಮ ಅನುಯಾಯಿಗಳನ್ನೇ ಏಕೆ ಓಡಿಸಿದಿರಿ? ತಿಳಿಯಲಿಲ್ಲ", ಎಂದ ಕಾವಲುಗಾರ.



ಧುನ್ ನುನ್ ಹೀಗೆಂದ : "ಗೆಳೆಯಾ! ಆ ಮೂರ್ಖರಿಗೆ ನಾನು ನಟಿಸುತ್ತಿರುವೆ ಎಂದು ಗೊತ್ತು. ಆದರೂ ಅವರೆದುರೇ ನಾನು ನಟಿಸಿದಾಗ, ನಂಬಿ ಓಡಿಹೋದರು. ಸ್ವಲ್ಪ ಕಾಲ ಕಳೆದ ಮೇಲೆ ಒಬ್ಬಿಬ್ಬರಿಗೆ ಇಂದಿನ ಪಾಠ ತಿಳಿಯುವುದು. ತೋರಿಕೆಯಿಂದ ಮೋಸ ಹೋಗದೆ ಇರುವುದನ್ನು, ವಿನಯವನ್ನು ಅವರು ಕಲಿತು ಹಿಂದಿರುಗುವರು. ಅಂತಹವರೇ ನಿಜವಾಗಿ ಕಲಿಯಬಲ್ಲವರು."

(ಆಧಾರಿತ)